ಅವಳು ಈಗ ಮಾಡಿಕೊಂಡಿರುವ "ಮರುಮದುವೆ" ಕೂಡ ಸಿನೋರ್ ತಾದ್ದೇಯಿಯ ಸೂಚನೆಯ ಮೇರೆಗೇ. ಬರಿಯ ಕಣ್ಣೀರಿನಿಂದಲೇ ಬದುಕಿನ ಉಪಚಾರ ನಡೆಯುವುದಿಲ್ಲ; ಜೀವಂತ ಇರುವವರಿಗೂ ಮತ್ತು ಮೃತ ವ್ಯಕ್ತಿಗೂ ಕೂಡ ಮೃತ್ಯುವಿನ ಅಗತ್ಯವಿದೆ ಎಂದು 'ಅವರೇ' ಅವಳಿಗೆ ಕಲಿಸಿಕೊಟ್ಟಿದ್ದರು. ಬರ್ತೊಲಿನೋನನ್ನು ಅವಳು ಪತಿಯಾಗಿ ವರಿಸಿದ್ದು ಕೂಡ ಅವರ ಈ ಮಾತನ್ನು ನೆನಪಿಟ್ಟುಕೊಂಡದ್ದರಿಂದಲೇ ಹೊರತು ಬೇರಿನ್ನಾವ ಕಾರಣದಿಂದಲೂ ಅಲ್ಲ. ಬರ್ತೊಲಿನೋ ತನ್ನನ್ನು ಪ್ರೀತಿಸುತ್ತಾನೆ ಎಂದಾದರೆ ಖಂಡಿತವಾಗಿಯೂ ತನ್ನ ಇಷ್ಟಕ್ಕನುಸಾರವಾಗಿಯೇ ನಡೆದುಕೊಳ್ಳುತ್ತಾನೆ. ಅಂದರೆ ಇದರ ಅರ್ಥ, ತಾದ್ದೇಯಿಯ ಇಷ್ಟಾನಿಷ್ಟಗಳನ್ನು ಅನುಸರಿಸುವುದು. ಯಜಮಾನರು 'ಅವರೇ', ಜೀವನ ರಥದ ಸಾರಥಿ. ಆದರೆ ಯೌವನದ ಕುರುಡಿನ ಅಜ್ಞಾನವಶನಾಗಿ ಬರ್ತೊಲಿನೋ, ಅವಳ ಮೊದಲ ಗಂಡ ಕಲಿಸಿಕೊಟ್ಟಿರುವುದಕ್ಕಿಂತ ಭಿನ್ನವಾದ ತೀರಾ ಸಾಮಾನ್ಯವಾದಂಥದ್ದನ್ನೂ ಲೀನಾ ತನಗೆ ಕೊಡಲಾರಳೆ? ಎಂದು ಕೇಳಿಕೊಳ್ಳುವನು. ಒಂದು ಚುಂಬನ, ಕಿಂಚಿತ್ ಪ್ರೀತಿ, ಆ ಗತವ್ಯಕ್ತಿಯ ಒಡೆತನದಿಂದ ಸ್ವಲ್ಪ ಹೊತ್ತಿನ ಮಟ್ಟಿಗಾದರೂ ಅವಳಿಗೆ ಬಿಡುಗಡೆ ಕೊಡುವಂತಹ ಏನನ್ನಾದರೂ ಅವಳು ತನಗೆ ನೀಡಲಾರಳೆ? ಎಂದು ಯೋಚಿಸುವನು. ಆದರೆ ಈ ಮಾತುಗಳನ್ನು ಹೇಳಲೂ ಅವನಿಗೆ ನಾಚಿಕೆ. ಇನ್ನು ಬಂಡಾಯದ ಮಾತಂತೂ ದೂರವೇ ಉಳಿಯಿತು. ಅದನ್ನು ಅವನು ಯೋಚಿಸಲಾರ.

ಹನಿಮೂನ್ ಮುಗಿಸಿಕೊಂಡು ಬಂದಮೇಲೆ ಒಂದು ಅನಿರೀಕ್ಷಿತವಾದ ಕೆಟ್ಟ ಸುದ್ದಿಯನ್ನು ಅವರು ಕೇಳಬೇಕಾಗಿ ಬಂತು. ಅದೆಂದರೆ ಅವರಿಬ್ಬರ ಮದುವೆಯ ಪ್ರಸ್ತಾಪ ಮಾಡಿದ್ದ ಸಿನೋರ್ ಮೋತ್ತಾ ಆಕಸ್ಮಿಕವಾಗಿ ತೀರಿಕೊಂಡಿದ್ದರು.

ಗಂಡನನ್ನು ಕಳೆದುಕೊಂಡು ತಾನು ವಿಧವೆಯಾದ ಸಂದರ್ಭದಲ್ಲಿ ಇದೇ ಮೋತ್ತಾರ ಹೆಂಡತಿ ಅರ್ತೆನ್ಸಿಯಾ ಅವಳಿಗೆ ಎಷ್ಟೊಂದೆಲ್ಲಾ ಮಾಡಿದ್ದರು ಎಂಬುದನ್ನು ಲೀನಾ ಎಂದಾದರೂ ಮರೆಯಲು ಸಾಧ್ಯವಿತ್ತೆ? ತನ್ನ ಗೆಳತಿಗೆ ನೆರವು ನೀಡಲು, ಸಾಂತ್ವನ ಹೇಳಲು ಅವಳೂ ಧಾವಿಸಿದಳು. ಆದರೆ ಗಂಡ ತೀರಿಕೊಂಡ ಹತ್ತುದಿನಗಳ ನಂತರವೂ ಅರ್ತೆನ್ಸಿಯಾ ಇಷ್ಟೊಂದು ದುಃಖಭರಿತಳಾಗಿರುವುದೇಕೆಂದು ಅವಳಿಗೆ ಅರ್ಥವಾಗಲಿಲ್ಲ.

"ಅವಳಿಗೇನಾಗಿದೆ ಹೇಳಿ" ಎಂದು ಮನೆಗೆ ಬಂದು ಗಂಡನನ್ನು ಕೇಳಿದಳು. ಹೆಂಡತಿಯ ಅಜ್ಞಾನವನ್ನು ಕಂಡು ಬರ್ತೊಲಿನೊ ನಾಚಿ ಕೆಂಪಾದ.

"ಇದಕ್ಕೆ ನೀನು ಏನು ಬೇಕಾದರೂ ಅರ್ಥ ಹಚ್ಚು. ಅವಳ ಗಂಡನ ಸಾವಾಗಿದೆ.''

"ಅವಳ ಗಂಡನೆ? ಅವರು ಸತ್ತುಹೋಗಿದ್ದರೆ ಏನಂತೆ? ಅವಳಿಗೆ ಅವರು ತಂದೆಯ ವಯಸ್ಸಿನ ಪತಿ.''

"ಆದರೇನಂತೆ? ಅವಳಿಗೆ ದುಃಖವಾಗಬಾರದೇನು?"

ಲೀನಾ ತಕ್ಷಣ ಹೇಳಿದಳು. "ತಂದೆಯ ವಯಸ್ಸಿನವರು. ಆದರೆ ತಂದೆಯಂತೂ ಅಲ್ಲವಲ್ಲ?"

ಲೀನಾ ಹೇಳಿದ್ದೇ ಸರಿ. ಲೀನಾಳ ಬಾಯಿಂದ ಅವಳ ಗತಿಸಿದ ಪತಿಯ ಬಗ್ಗೆ ಕೇಳುತ್ತ ಕೇಳುತ್ತ ಬರ್ತೊಲಿನೋನ ಮನಸ್ಸಿನಲ್ಲಿ ತಿರಸ್ಕಾರ ತುಂಬಿಬಿಟ್ಟಿತ್ತು ಎನ್ನುವುದನ್ನು ಅರ್ತೆನ್ಸಿಯಾ ಗಮನಿಸಿದ್ದಳು. ಅದೇ ಕಾರಣದಿಂದಲೇ ಅರ್ತೆನ್ಸಿಯ ಗಾಢವಾದ ದುಃಖ ಮನಸ್ಸಿನಲ್ಲಿ ತುಂಬಿದ್ದರೂ ತನ್ನ ಮನಸ್ಸನ್ನು ಮರೆಸಲೆತ್ನಿಸಿದಳು. ಅವಳ ದುಃಖವು ಬರ್ತೊಲಿನೋನನ್ನು ಅದೆಷ್ಟು ಗಂಭೀರರೂಪದಲ್ಲಿ ವಿಚಲಿತನನ್ನಾಗಿಸಿತೆಂದರೆ ತನ್ನ ಹೆಂಡತಿಯ ವಿಷಯಕ್ಕೆ ಅವನು ಮೊದಲ ಬಾರಿಗೆ ಬಂಡಾಯವೆದ್ದನು.

"ನೀನು... ನೀನು ಕೂಡ ಅತ್ತಿರಲಿಲ್ಲವೇನು?"

ಅವನು ಬಹುಶಃ ಇನ್ನೂ ಏನೋ ಹೇಳುತ್ತಾ ಇದ್ದನೇನೋ. ಆದರೆ ಲೀನಾ ಅವನ ಮಾತನ್ನು